ಸೈಟ್‌ಗಳೂ, ಶಾಪ್‌ಗಳೂ ಇವೆ. ದಯವಿಟ್ಟು ನಿಮಗೆ ಅವಶ್ಯಕ ಇರೋದನ್ನು ಮಾತ್ರ ತಗೊಂಡು ಉಳಿದವರಿಗೂ ಅವಕಾಶ ಕೊಡಿ' ಅಂತ. ಇದು ಸನ್‌ಶೈನ್‌ಗಾಗೇ ಬರೆದಿದ್ದು ಅಂತ ನಮಗಾಗ ಗೊತ್ತಗದಿದ್ದರೂ ಇದು ಅವಳಿಗೇ ಅನ್ವಯಿಸುವುದು ಅಂತ ಮಾತ್ರ ಅಂದುಕೊಂಡೆ. ಇದಾಗಿ ಒಂದೆರಡು ವಾರದವರೆಗೂ ಅವಳ ಆಕ್ರಮಣ ಮಾತ್ರ ಯಾವ ಅಡೆತಡೆ ಇಲ್ಲದೆ ನಡೆಯಿತು.

ಒಂದು ಮಧ್ಯಾಹ್ನ ಒಬ್ಬಾಕೆ ತನ್ನ ಯಾವುದೋ ಸ್ಟೀರಿಯೋ ಸಿಸ್ಟಮ್ ಅನ್ನು ಸೇಲ್‌ಗೆ ಹಾಕಿದ್ದಾಳೆ. ಅದನ್ನು ಯಾರೋ ಬೇಕು ಎಂದು ಕೇಳಿ, ಇವಳು ಎಸ್ ಎಂದೂ ಆಯಿತು. ಆಮೇಲೆ ಇವಳು ಮನೆಯಲ್ಲಿಲ್ಲದಾಗ ಒಬ್ಬಳು ಬಂದು ಕೆಲಸದವಳಿಗೆ ತಾನೇ ಆ ವ್ಯಕ್ತಿ ಎಂದು ಸುಳ್ಳು ಹೇಳಿ ಅವರಿಗಾಗಿ ರಿಸರ್ವ್ ಆಗಿಟ್ಟಿದ್ದ ಸಾಮಾನನ್ನು ತಗೊಂಡು ಹೋಗಿದಾಳೆ. ಈ ಸನ್‌ಶೈನ್ ಮಾಡಿದ ಕೆಲಸ ಅದು ಅಂತ ಪತ್ತೆ ಹಚ್ಚಿ ಅವಳು ತಕ್ಷಣ ತಂದು ಕೊಟ್ರೆ ಸರಿ ಇಲ್ಲಾಂದ್ರೆ ಅವಳನ್ನ ಸುಮ್ಮನೆ ಬಿಡಲ್ಲ ಎಂದು ಧಮಕಿ ಹಾಕಿದಳು ಆ ಸ್ಟೀರಿಯೋ ಒಡತಿ. ಕೂಡಲೇ ಅವಳ ಮಾತನ್ನು ಸಮರ್ಥಿಸುವಂತೆ ಇನ್ನೊಂದು ಪೋಸ್ಟ್ ಹಾಕಿದ ಇನ್ನೊಬ್ಬಾತ. ಅದರಲ್ಲಿ ಸನ್‌ಶೈನ್ ಇಲ್ಲಿಂದ ಪಡೆದುಕೊಂಡ ಅದೆಷ್ಟೋ ವಸ್ತುಗಳನ್ನು ಇನ್ನಾವುದೋ ಆನ್‌ಲೈನ್ ಸೈಟ್‌ನಲ್ಲಿ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರುವುದನ್ನು ಫೋಟೊ ಸಮೇತ ಹಾಕಿದ್ದ. ಅಲ್ಲಿ ಅವಳು ಇನ್ನೊಂದು ನಿಕ್ ನೇಮ್ ಇಟ್ಟುಕೊಂಡಿದ್ದಳು. ಸನ್‌ಶೈನ್ ಕೂಡ ಅವಳ ನಿಕ್‌ನೇಮ್. ಈಗ ಅವಳ ಬಣ್ಣ ಬಯಲಾಯಿತು. ಎಲ್ಲರೂ ಅವರವರ ಅಸಹನೆಯನ್ನು ಹೇಳಿಕೊಳ್ಳತೊಡಗಿದರು. ನಮ್ಮ ಅಡ್ಮಿನ್ ತನ್ನ ದುರ್ಬೀನು ತೆಗೆದು ಅವಳ ಜಾತಕ ಜಾಲಾಡಿ ಅವಳು ನಮ್ಮ ಏರಿಯಾದವಳೇ ಅಲ್ಲ ಎಂದು ಪತ್ತೆ ಹಚ್ಚಿ ಆಗಿಂದಾಗಲೇ ಅವಳು ಎಲ್ಲರ ಕ್ಷಮೆ ಕೋರುವಂತೆ ತಿಳಿಸಿ ನಮ್ಮ ಗ್ರೂಪಿನಿಂದ ಅವಳನ್ನು ಬೇರು ಸಮೇತ ಕಿತ್ತೆಸೆದಳು ಎಂಬಲ್ಲಿಗೆ ಈ ಸೈಬರ್ ಜಾಲದ ಮೋಸದ ಒಂದು ಸಣ್ಣ ಝಲಕ್ ಸಿಕ್ಕಿತು ನಮಗೆ ಫ್ರೀಯಾಗಿ. ಹಾಡಹಗಲಲ್ಲೇ ಸನ್ ಶೈನ್ ತನ್ನೆಲ್ಲ ಪ್ರಭೆಯನ್ನೂ ಕಳೆದುಕೊಂಡು ಮುಖಕ್ಕೆ ಮಸಿ ಬಳಿಸಿಕೊಂಡಂತಾಗಿ ನಿರ್ಗಮಿಸಿದಳು. ಎಕ್ಸ್ ಪ್ಯಾಟ್ ನವರ ಸೇಲು, ರೀಸೇಲು ಎಂದಿನಂತೇ ನಡೆಯುತ್ತಿದೆ, ಎಲ್ಲಿ ಸನ್‌ಶೈನ್ ಬಂದು ಬಾಚಿಕೊಂಡು ಹೋಗಿಬಿಡುತ್ತಾಳೋ ಎಂಬ ಗಾಬರಿ ಮಾತ್ರ ಯಾರಿಗೂ ಇಲ್ಲ.

ಈ ಮಾಯಾಬಜಾರ್‌ನಲ್ಲಿ ಇನ್ನೂ ಏನೇನು ನೋಡುವುದು ಬಾಕಿ ಇದೆಯೋ ಆ ಸೈಬರೇಶ್ವರನೇ ಬಲ್ಲ.


### ಜಯಶ್ರೀ ಭಟ್

ಸಿಂಗಪುರದಲ್ಲಿ ನೆಲೆಸಿರುವ ಜಯಶ್ರೀ ಶಿವಮೊಗ್ಗ ಜಿಲ್ಲೆಯ ಸೊರಬದವರು. ಮೈಸೂರಿನ ಚಾಮರಾಜೇಂದ್ರ ಅಕಾಡೆಮಿಯಲ್ಲಿ ಕಲಾಭ್ಯಾಸಂಗ ಮಾಡಿ ಚಿತ್ರಕಲೆಯಲ್ಲಿ ಪದವಿ ಪಡೆದಿದ್ದಾರೆ. ಕಲಾಸಂರಕ್ಷಣೆಯಲ್ಲಿ ಆಸಕ್ತರಾದ ಇವರು INTACHನ ಬೆಂಗಳೂರು ಶಾಖೆಯಲ್ಲಿ ತರಬೇತಿ ಪಡೆದಿದ್ದಾರೆ. ಸಿಂಗಪುರದರಲ್ಲಿ ಕಲಾ ಸಂರಕ್ಷಣಾ ಕೇಂದ್ರವೊಂದನ್ನು ಸ್ಥಾಪಿಸಿದ್ದಾರೆ. 'ಮಾವೋನ ಕೊನೆಯ ನರ್ತಕ', 'ಆಮೋಸ್ ಫಾರ್ಚೂನ್' ಅವರ ಅನುವಾದಿತ ಪುಸ್ತಕಗಳಾಗಿವೆ.